13.	ಹಾಸನ	1496+4	1496+4	1496+4
14.	ಕೊಡಗು	560	550	550
15.	ಕೋಲಾರ	2100+12	2100+12	2110+12
16.	ಮಂಡ್ಯ	1250	1250	1250
17.	ಮೈಸೂರು	3850	3800	3800
18.	ರಾಯಚೂರು	1800	1775	1775
19.	ಶಿವಮೊಗ್ಗ	1892+8	1892+8	1892+2
20.	ತುಮಕೂರು	1850	1900	1900
21.	ಉತ್ತರಕನ್ನಡ	1340+10	1340+10	1340+10
	ಒಟ್ಟು	52364	52214	52185

ರಾಜ್ಯಕ್ಕೆ ಅವಶ್ಯಕ ಪದಾರ್ಥಗಳ ಪ್ರಮಾಣ.

1527 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಂದು ತಿಂಗಳಿಗೆ ರಾಜ್ಯಕ್ಕೆ ಬೇಕಾಗಿರುವ ಅಕ್ಕಿ, ಗೋಧಿ, ಸಕ್ಕರೆ, ಸೀಮೆ ಎಣ್ಣೆ, ತಾಳೆ ಎಣ್ಣೆ ಪ್ರಮಾಣ ಎಷ್ಟು?

ಆ) ಈವಾಗ ಕೇಂದ್ರದಿಂದ ಸರಬರಾಜು ಆಗುತ್ತಿರುವ ಪದಾರ್ಥಗಳು ಬೇಡಿಕೆಗೆ ಅನುಗುಣವಾಗಿದೆಯೇ?

ಇ) ಬಡವರ ಆಹಾರ ವಸ್ತುಗಳು ಬೆಲೆಯನ್ನು ಹತೋಟಿಯಲ್ಲಿಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ.ಎನ್ ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ರಾಜ್ಯಕ್ಕೆ ಈಗ ಬೇಕಾಗಿರುವ ಒಂದು ತಿಂಗಳ ಪ್ರಮಾಣ ಈ ಕೆಳಕಂಡಂತೆ ಇದೆ.

ಅಕ್ಕಿ	75000 ಮೆಟ್ರಿಕ್ ಟನ್
ಗೋಧಿ	50000 ಮೆಟ್ರಿಕ್ ಟನ್
ಸಕ್ಕರೆ	25000 ಮೆಟ್ರಿಕ್ ಟನ್
ತಾಳೆ ಎಣ್ಣೆ	11000 ಮೆಟ್ರಿಕ್ ಟನ್
ಸೀಮೆ ಎಣ್ಣೆ	67000 ಕೆ.ಎಲ್.

ಆ) ಈಗ ಕೇಂದ್ರದಿಂದ ಈ ಕೆಳಕಂಡ ಪ್ರಮಾಣದಲ್ಲಿ ಮಾರ್ಚ್ ತಿಂಗಳು 1991 ಕ್ಕೆ ಹಂಚಿಕೆ ನೀಡಿರುತ್ತಾರೆ.

ಅಕ್ಕಿ	48000 ಮೆಟ್ರಿಕ್ ಟನ್
ಗೋಧಿ	45000 ಮೆಟ್ರಿಕ್ ಟನ್
ಸಕ್ಕರೆ	17772 ಮೆಟ್ರಿಕ್ ಟನ್
ತಾಳೆ ಎಣ್ಣೆ	2100 ಮೆಟ್ರಿಕ್ ಟನ್
ಸೀಮೆ ಎಣ್ಣೆ	45208 ಕೆ.ಎಲ್.

ಈ ಪ್ರಮಾಣ ಬೇಡಿಕೆಗೆ ಅನುಗುಣವಾಗಿರುವುದಿಲ್ಲ.

ಇ) ಆಹಾರ ವಸ್ತುಗಳಾದ ಅಕ್ಕಿ, ಗೋಧಿ, ಸಕ್ಕರೆ, ತಾಳಿಎಣ್ಣೆ, ಸೀಮೆಎಣ್ಣೆ ಇವುಗಳನ್ನು ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಗ್ರಾಹಕರಿಗೆ ನಿಗಧಿಪಡಿಸಿದ ಬೆಲೆಯಲ್ಲಿ ಒದಗಿಸಲಾಗುತ್ತಿದೆ.

ಇದಲ್ಲದೇ ಸರ್ಕಾರವು ಸಹಾಯ ಧನಯುಕ್ತ ಪಡಿತರ ಆಹಾರ ಪದಾರ್ಥಗಳನ್ನು ಹಸಿರು ಕಾರ್ಡುಗಳ ಮೂಲಕ ಕಡಿಮೆ ದರದಲ್ಲಿ ಬಡ ಕುಟುಂಬಗಳಿಗೆ ವಿತರಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ.

ಇದರ ಜೊತೆಗೆ ಜಿಲ್ಲಾಧಿಕಾರಿಗಳು ಆಹಾರ ಇಲಾಖೆಯ ಅಧಿಕಾರಿಗಳು ಮತ್ತು ಫುಡ್ ಎನ್ ಪೋರ್ಸೆಮೆಂಟ್ ಸೆಲ್ ಅಧಿಕಾರಿಗಳಿಗೆ ಕಾಳ ಸಂತೆಕೋರರ ಮತ್ತು ಅಕ್ರಮ ದಾಸ್ತಾನುಗಾರರ ಮೇಲೆ ವ್ಯಾಪಕ ದಾಳಿ ನಡೆಸಿ ಅಕ್ರಮ ದಾಸ್ತಾನು ವಶಪಡಿಸಿಕೊಂಡು ಮೊಕದ್ದಮೆ ಹೂಡಲು ನಿರ್ದೇಶನ ನೀಡಲಾಗಿದೆ.

ಈ ರೀತಿ ಹೂಡಿರುವ ಮೊಕದ್ದಮೆಗಳ ವಿವರ ಈ ಕೆಳಕಂಡಂತೆ ಇವೆ.

	ನಡೆಸಿದ ದಾಳಿಗಳ ಸಂಖ್ಯೆ	ಹೂಡಿದ ಮೊಕದ್ದಮೆಗಳ ಸಂಖ್ಯೆ	ವಶಪಡಿಸಿ ಕೊಂಡವಸ್ತುಗಳ ಬೆಲೆ
ಆಹಾರ ಇಲಾಖೆಯ ಅಧಿಕಾರಿಗಳಿಂದ ದಿ: 1-1-1990 ರಿಂದ 31-1-91ರವರೆಗೆ	2240	589	42074757.00
ಎನ್ ಫೋರ್ಸ್ಮೆಂಟ್ ಸೆಲ್ ಅಧಿಕಾರಿಗಳಿಂದ ದಿ:1-4-90 ರಿಂದ 31-1-91ರವರೆಗೆ	1112	346	35310773.00
ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಪದಾರ್ಥಗಳ ಬೆಲೆ	—		8,25,856-00

ಇಲಾಖೆಯ ಸತತವಾದ ಎಚ್ಚರಿಕೆಯಿಂದಾಗಿ ಬೆಲೆಗಳ ಮಿತಿಯನ್ನು ಕಾಪಾಡಲು ಸಾಧ್ಯವಾಗಿದೆ.

ಇದಲ್ಲದೇ ರಾಜ್ಯಕ್ಕೆ ಅವಶ್ಯಕವಿರುವ ಆಹಾರ ಪದಾರ್ಥಗಳ ಪ್ರಮಾಣವನ್ನು ಹಂಚಿಕೆ ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ಹುಣಸೂರು ಪ್ರದೇಶದಲ್ಲಿ ಕಾಡಾನೆಗಳ ಹಾವಳಿ

1429 - ಶ್ರೀಮತಿ ಚಂದ್ರಪ್ರಭಾ ಅರಸ್ (ಹುಣಸೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಮತ್ತು ಸುತ್ತಲ ಪ್ರದೇಶದಲ್ಲಿ ಆದರಲ್ಲೂ ಹನಗೋಡು ಹೋಬಳಿಗಳಲ್ಲಿ ಕಾಡಾನೆಗಳು ಆಗಾಗ್ಗೆ ಬಂದು ರೈತರ ಗದ್ದೆ ಹೊಲಗಳಿಗೆ ನುಗ್ಗಿ ಬೆಳೆ ಹಾನಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ತಪ್ಪಿಸಲು ಕಾಡಿನ ಅಂಚಿನ ಸುತ್ತಲೂ ಮಣ್ಣಿನ ಕಾಲುವೆ ಅಥವಾ ಆನೆ ತಡೆಗೆ ದೊಡ್ಡ ಹಳ್ಳಗಳನ್ನು ತೋಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಇ) ಬೆಳೆ ನಷ್ಟ ಹೊಂದಿದ ರೈತರಿಗೆ ಪರಿಹಾರ ಸರಿಯಾದ ಪ್ರಮಾಣದಲ್ಲಿ ಶೀಘ್ರವಾಗಿ ದೊರೆಯುವಂತೆ ಮಾಡಲು ಸೂಕ್ತ ಆದೇಶ ನೀಡಲಾಗುವುದೇ?

ಈ) ಹಾಗಿದ್ದಲ್ಲಿ ಪರಿಹಾರ ಕೊಟ್ಟಿರುವ ಮೊತ್ತವೆಷ್ಟು?